ಸಾಧಕ ರೈತ

# ಆಯಿಸ್ಟರ್ ಅಣಬೆ ಉದ್ಯಮದಿಂದ ಯಶಸ್ಸು ಕಾಣುತ್ತಿರುವ ಮಲೆನಾಡಿನ ಯುವಕ – ಶ್ರೀ ಶಿಶಿರ್ ಬಿ.ಎಸ್.

✍ ಭರತ್ ಕುಮಾರ್ ಟಿ.ಪಿ., 9480838203, ಗಿರೀಶ್ ಆರ್., ಕಿರಣ್ ಆರ್., ಶೃತಿ ಹೆಚ್. ಆರ್. ಮತ್ತು ಪ್ರವೀಣ್ ಕೆ. ಎಂ.
ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ ಮೂಡಿಗೆರೆ, ಚಿಕ್ಕಮಗಳೂರು

ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು, ಬಸ್ನಿ ಗ್ರಾಮದ ಶ್ರೀ ಶ್ರೀಕಂಠೇಗೌಡ ಅವರ ಪುತ್ರ ಶ್ರೀ ಶಿಶಿರ್ ಬಿ.ಎಸ್. ಓದಿದ್ದು ಎಂ.ಬಿ.ಎ. ಬೆಂಗಳೂರಿನಲ್ಲಿರುವ ಅಂತಾರಾಷ್ಟ್ರೀಯ ಮಟ್ಟದ ಈ.ಎನ್.ವೈ– ಎನ್‌ರಿಸ್ಟ್ ಯಂಗ್, ಓರ್ಯಾಕಲ್ ಕಂಪನಿಯಲ್ಲಿ ಫೈನಾನ್ಷಿಯಲ್ ಅನಾಲಿಸ್ಟ್ ಆಗಿ ಉದ್ಯೋಗ ಮಾಡುತ್ತಿದ್ದರು. ದಿನದ 10–12 ಗಂಟೆಯ ಕೆಲಸದ ನಡುವೆ, ಬಿಡುವಿನ ವೇಳೆಯಲ್ಲಿ ದೇಶ ವಿದೇಶಗಳಲ್ಲಿನ ಅಣಬೆ ಬೇಸಾಯದ ಆವಿಷ್ಕಾರಗಳನ್ನು ಅಧ್ಯಯನ ನಡೆಸಿ, ಇಂಟರ್‌ನೆಟ್ ಮೂಲಕ ಅಣಬೆ ಕೃಷಿಯನ್ನು ಒಂದು ಫ್ಯಾಷನ್ ಆಗಿ ಆಯ್ಕೆ ಮಾಡಿಕೊಂಡು, ವಾರದಲ್ಲಿ ಸಿಗುವ ಎರಡು ರಜೆಗಳನ್ನು ಅಣಬೆ ಕೃಷಿಯ ಆವಿಷ್ಕಾರಗಳು ಹಾಗೂ ನಿರ್ವಹಣೆಗೆ ಮೀಸಲಿಟ್ಟಿದ್ದರು. ತದನಂತರ ಅಣಬೆ ಬೇಸಾಯ ಹೆಚ್ಚು ಲಾಭವೆಂದು ಹಾಗೂ ಅಣಬೆ ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಆಯ್ಕೆ ಮಾಡಿಕೊಳ್ಳಬಹುದು ಎಂದು ಅರಿತ ತಕ್ಷಣ ಕೈತುಂಬಾ ಸಂಬಳ ಬರುವ ಉತ್ತಮ ಸ್ಥಾನದ ಉದ್ಯೋಗವನ್ನು ತ್ಯಜಿಸಿ, ಹಿಂದೆ ನೋಡದೆ ನೇರ ಕಾಲಿಟ್ಟಿದ್ದು ಬಸ್ನಿ ಗ್ರಾಮದ ಅಣಬೆ ಕೃಷಿ ಘಟಕಕ್ಕೆ.

ಇವರು 2016ರಲ್ಲಿ ಮೂಡಿಗೆರೆಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳನ್ನು ಭೇಟಿ ಮಾಡಿ ಅಣಬೆ ಕೃಷಿಯ ಬಗ್ಗೆ ಚರ್ಚಿಸಿ, ನಂತರ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದಂತಹ "ಗ್ರಾಮೀಣ ಭಾಗದಲ್ಲಿ ಅಣಬೆ ಬೇಸಾಯ" ಕುರಿತ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪ್ರಾಯೋಗಿಕವಾಗಿ ಅಣಬೆ ಕೃಷಿಯನ್ನು ಮಾಡಿ ಅನುಭವದ ಜೊತೆಗೆ ಮಾಹಿತಿಯನ್ನು ಪಡೆದಿದ್ದಾರೆ.

ತರಬೇತಿಯ ಮಾಹಿತಿಯನ್ನು ಉಪಯೋಗಿಸಿಕೊಂಡು ಪ್ರಾಯೋಗಿಕವಾಗಿ ಒಂದು ಕೆ.ಜಿ. ಅಣಬೆ ಬೀಜವನ್ನು ಉಪಯೋಗಿಸಿಕೊಂಡು 5 ಅಣಬೆ ತಯಾರಿಕೆ ಪ್ಯಾಕೇಟುಗಳನ್ನು ಮಾಡಿ 20 ದಿನ ಅಣಬೆಯ ಬೆಳೆಗಾಗಿ ಕಾಯುತ್ತಾ ಕೂರುತ್ತಾರೆ. 25 ದಿನದ ನಂತರ ಬಂದಂತಹ ಅಣಬೆಯ ಬೆಳೆಯನ್ನು ಕಂಡು ಆಶ್ಚರ್ಯಚಕಿತನಾಗಿ, ಖುಷಿಪಟ್ಟು ಕೃಷಿ ವಿಜ್ಞಾನ ಕೇಂದ್ರಕ್ಕೆ ಅಣಬೆ ತಯಾರಿಕಾ ಪ್ಯಾಕೆಟ್‌ಗಳ ಸಮೇತ ಬಂದು ಅಣಬೆ ಬೇಸಾಯವನ್ನು ನಾನು ಗ್ರಾಮೀಣ ಭಾಗದ ಲಾಭ ತರುವ ಉದ್ಯಮವಾಗಿ ಪ್ರಾರಂಭಿಸುತ್ತೇನೆ ಎಂದು ಪಣ ತೊಟ್ಟು ಹರ್ಷ ವ್ಯಕ್ತಪಡಿಸಿ ಅಣಬೆ ಕೃಷಿಯನ್ನು ಮುಖ್ಯ ಉದ್ಯಮವಾಗಿ ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದರು.





ಕೃಷಿ ವಿಜ್ಞಾನ ಕೇಂದ್ರದ ತರಬೇತಿ ಜೊತೆಗೆ, ತೋಟಗಾರಿಕಾ ಇಲಾಖೆ ಹಾಗೂ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರುಘಟ್ಟದ ವಿಜ್ಞಾನಿಗಳ ಜೊತೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಮಲೆನಾಡಿನ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಅಣಬೆಯನ್ನು ಬೆಳೆಯಲು ಪ್ರಾರಂಭಿಸುತ್ತಾರೆ.

ಶ್ರೀಯುತ ಶಿಶಿರ್‌ರವರು ಒಂದು ದಿನಕ್ಕೆ 5 ಪ್ಯಾಕೆಟ್‌ನಿಂದ ಪ್ರಾರಂಭ ಮಾಡಿದ ಅಣಬೆ ಕೃಷಿಯನ್ನು ಕೆಲವೇ ದಿನಗಳಲ್ಲಿ ಒಂದು ದಿನಕ್ಕೆ 200 ಪ್ಯಾಕೆಟ್‌ಗಳನ್ನು ಮಾಡುವ ಸಾಮರ್ಥ್ಯಕ್ಕೆ ಬೆಳೆಸಿದ್ದಾರೆ. ಒಂದು ಪ್ಯಾಕೆಟ್‌ನಿಂದ ತಲಾ ಒಂದು ಕೆ.ಜಿ. ಸರಾಸರಿ ಅಣಬೆಯನ್ನು ಬೆಳೆಯುವುದರ ಜೊತೆಗೆ ಅತೀ ಹೆಚ್ಚು ಇಳುವರಿಯಾಗಿ ಒಂದು ಪ್ಯಾಕೆಟ್‌ನಿಂದ ಎರಡು ಕೆ.ಜಿ.ವರೆಗೂ ಅಣಬೆಯನ್ನು ಪಡೆದು ಯಶಸ್ವಿ ಅಣಬೆ ಕೃಷಿಕರಾಗಿ ಹೊರಹೊಮ್ಮಿದ್ದಾರೆ. ಇದರಿಂದಾಗಿ ಶಿಶಿರ್‌ರವರಿಗೆ ಆಯಿಸ್ಟರ್ ಅಣಬೆ ಕೃಷಿ ಮಾಡಲು ಉತ್ಸಾಹ ಮತ್ತು ಆತ್ಮವಿಶ್ವಾಸ ಮತ್ತಷ್ಟು ಹೆಚ್ಚಿದೆ.

**ಶಿಶಿರ್‌ರವರು ಮಾಡುವ ಅಣಬೆ ಬೇಸಾಯದ ವಿಧಾನ**

ತಮ್ಮ ಬಳಿ ಇದ್ದ ಅನುಪಯುಕ್ತ ಒಂದು ಹಳೆಯ ಹಂಚಿನ ಮನೆಯಲ್ಲಿ (30 ಅಡಿ x 40 ಅಡಿ) ದೊಡ್ಡ ಪ್ರಮಾಣದಲ್ಲಿ ವೈಜ್ಞಾನಿಕವಾಗಿ ಅಣಬೆ ಕೃಷಿ ಮಾಡಲು ನಿರ್ಧರಿಸುತ್ತಾರೆ. ಮನೆಯನ್ನು ಸ್ವಚ್ಛಗೊಳಿಸಿ ಶೇಕಡಾ ಒಂದು ಫಾರ್ಮಲಿನ್‌ನಿಂದ ಸಿಂಪಡಣೆ ಮಾಡಿ 2 ದಿನ ಬಾಗಿಲು ಮುಚ್ಚಿ ಮನೆಯನ್ನು ಅಣಬೆ ಕೃಷಿ ಮಾಡಲು ಸಿದ್ಧಪಡಿಸುತ್ತಾರೆ.

ಶಿಶಿರ್‌ರವರು ಭತ್ತದ ಹುಲ್ಲನ್ನು 2–4 ಅಂಗುಲ ಉದ್ದಕ್ಕೆ ಕತ್ತರಿಸಿಕೊಂಡು ತಣ್ಣೀರಿನಲ್ಲಿ 12–24 ಗಂಟೆ ಕಾಲ ನೆನೆಸಿಟ್ಟು ತದನಂತರ ತಣ್ಣೀರನ್ನು ಬಸಿದು ಅದೇ ಹುಲ್ಲನ್ನು ಅರ್ಧ ಗಂಟೆಗಳ ಕಾಲ ಬಿಸಿ ನೀರಿನಲ್ಲಿ ಬೇಯಿಸಿ ನಂತರ ಹುಲ್ಲನ್ನು ಹೊರ ತೆಗೆದು ನೆರಳಿನಲ್ಲಿ ಒಣಗಿಸಿ ಹುಲ್ಲಿನಲ್ಲಿರುವ ಹೆಚ್ಚು ತೇವಾಂಶವನ್ನು ತೆಗೆದು ಹುಲ್ಲನ್ನು ಸಿದ್ಧ ಮಾಡಿಕೊಳ್ಳುತ್ತಾರೆ. ಪ್ರಯೋಗಾಲಯದಿಂದ ತಂದಂತಹ ಅಣಬೆ

ಬೀಜಗಳನ್ನು ಅಣಬೆ ಪ್ಯಾಕೆಟ್ ಮಾಡಲು ಬಳಸುತ್ತಾರೆ. 12 x 8 ಗಜದ ಪಾಲಿಥೀನ್ ಕವರ್‌ನಲ್ಲಿ 2 ಇಂಚು ದಪ್ಪ ಭತ್ತದ ಹುಲ್ಲನ್ನು ಒಂದು ಪದರ ತುಂಬಿ ಆ ಪದರದ ಮೇಲೆ ಒಂದು ಪದರ ಅಣಬೆ ಬೀಜವನ್ನು ಚೆಲ್ಲುತ್ತಾರೆ. ಹೀಗೆ ಒಂದು ಪದರ ಹುಲ್ಲು, ಒಂದು ಪದರ ಅಣಬೆ ಬೀಜವನ್ನು 4 ರಿಂದ 5 ಪದರ ತುಂಬಿ ಪ್ಲಾಸ್ಟಿಕ್ ಚೀಲದ ಬಾಯಿಯನ್ನು ಬಿಗಿಯಾಗಿ ಕಟ್ಟಿ, ಪ್ಲಾಸ್ಟಿಕ್ ಚೀಲಕ್ಕೆ 4 ರಿಂದ 5 ರಂಧ್ರಗಳನ್ನು ಮಾಡಿ ಸ್ವಚ್ಛವಾಗಿರುವ ಅಣಬೆ ಕೊಠಡಿಯಲ್ಲಿ 20 ದಿನಗಳ ಕಾಲ ಇಡುತ್ತಾರೆ. 21ನೆ ದಿನ ಬಾಯಿ ಕಟ್ಟಿದ ಪ್ಲಾಸ್ಟಿಕ್ ಚೀಲವನ್ನು ಬ್ಲೇಡ್ ಸಹಾಯದಿಂದ ಕತ್ತರಿಸಿ ತೆಗೆಯುತ್ತಾರೆ. ಉಳಿದಂತಹ ಅಣಬೆ ಪ್ಯಾಕೆಟ್ ಪಿಂಡಿಗೆ ನಾಲ್ಕು ದಿನ ಕೋಣೆಯ ಉಷ್ಣಾಂಶದ ಅನುಗುಣವಾಗಿ ನೀರನ್ನು ನೀಡುತ್ತಾ ಬರುತ್ತಾರೆ. ಹೀಗೆ ಮಾಡಿದ ನಂತರ 25ನೇ ದಿನಕ್ಕೆ, 30ನೇ ದಿನಕ್ಕೆ, 35ನೇ ದಿನಕ್ಕೆ 3 ಬಾರಿ ಅಣಬೆಯನ್ನು ಕಟಾವು ಮಾಡಿಕೊಳ್ಳುತ್ತಾರೆ.

ಅಣಬೆ ಕೃಷಿಗೆ ಬಹು ಮುಖ್ಯವಾಗಿ ಬೇಕಾದಂತಹ ಮೂರು ವಸ್ತುಗಳಾದಂತಹ ಭತ್ತದ ಹುಲ್ಲು, ಅಣಬೆ ಬೀಜ ಹಾಗೂ ಪ್ಲಾಸ್ಟಿಕ್ ಕವರ್‌ಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳುತ್ತಾರೆ. ತಮ್ಮದೇ ಜಮೀನಿನಲ್ಲಿ ಬೆಳೆದಂತಹ ಭತ್ತದ ಹುಲ್ಲನ್ನು ಮಾರಾಟ ಮಾಡದೆ, ವ್ಯಯ ಮಾಡದೆ ಅಣಬೆ ಕೃಷಿಗೆ ಉಪಯೋಗಿಸಲು ನಿರ್ಧರಿಸುತ್ತಾರೆ. ಇದರಿಂದಾಗಿ ಭತ್ತದ ಹುಲ್ಲಿನ ಮೇಲೆ ಹೂಡಿಕೆ ಮಾಡಬೇಕಾದಂತಹ ಖರ್ಚು ಕಮ್ಮಿಯಾಗುತ್ತದೆ. ಅಣಬೆ ಬೀಜವನ್ನು ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯಿಂದ ಮೊದಲೇ ಕಾಯ್ದಿರಿಸಿ, ಸರಿಯಾದ ಸಮಯದಲ್ಲಿ ಕೊಂಡುಕೊಂಡು ಅಣಬೆ ಕೃಷಿಗೆ ಸಜ್ಜಾಗುತ್ತಾರೆ. ಹುಲ್ಲನ್ನು ಬೇಯಿಸಿಕೊಳ್ಳಲು ಆಗುತ್ತಿರುವ ತೊಡಕುಗಳನ್ನು ಇತರೆ ಅಣಬೆ ಕೃಷಿಯ ರೈತರಿಂದ ಕೇಳಿ ತಿಳಿದ ನಂತರ ಶಿಶಿರ್‌ರವರು ಹುಲ್ಲನ್ನು ಬೇಯಿಸಲು ವೈಜ್ಞಾನಿಕ ಪದ್ಧತಿಯನ್ನು ಅಳವಡಿಕೆ ಮಾಡಿಕೊಳ್ಳಬೇಕು ಎಂದು ನಿರ್ಧರಿಸಿ ಆಟೋಕ್ಲೇವ್‌ಅನ್ನು ಖರೀದಿಸುತ್ತಾರೆ. ಆಟೋಕ್ಲೇವ್‌ಅನ್ನು ಖರೀದಿಸಿದ್ದರಿಂದ ಶಿಶಿರ್‌ರವರಿಗೆ ಹುಲ್ಲು ಬೇಯಿಸಿಕೊಳ್ಳಲು ಸುಲಭವಾಗಿರುವುದರ ಜೊತೆಗೆ ಅಣಬೆ ಕೃಷಿಗೆ ಬೇಕಾದಂತಹ ತಾಪಮಾನದಲ್ಲಿ ಹುಲ್ಲನ್ನು ಸಿದ್ಧಪಡಿಸಿಕೊಳ್ಳಲು ಹಾಗೂ ಹುಲ್ಲಿನಿಂದ ಹರಡುವ ಅಪಾಯಕಾರಿ ಜೀವಾಣುಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ. ಇದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಅಣಬೆ ಕೃಷಿಯನ್ನು ಮಾಡಲು ಇದು ಸಹಾಯವಾಗುತ್ತದೆ. ಇದಲ್ಲದೆ, ಅಣಬೆ ಕೃಷಿಗೆ ನಿಗದಿಪಡಿಸಿದಂತಹ ಹುಲ್ಲಿನ ಕಟಾವಿನ ಅಳತೆಯನ್ನು ವೈಜ್ಞಾನಿಕವಾಗಿ ಮಾಡಲು ಹಾಗೂ ಅತೀ ಶೀಘ್ರದಲ್ಲಿ ಹುಲ್ಲನ್ನು ಕಟಾವು ಮಾಡಲು ಶಿಶಿರ್‌ರವರು ತಮ್ಮದೇ ಆದ ಸುಲಭ ಉಪಾಯ ಕಂಡುಕೊಂಡು ತಮ್ಮಲ್ಲೆ ಇದ್ದ ಸಾ ಕಟ್ಟಿಂಗ್ ಮಿಷನ್‌ನನ್ನು ಉಪಯೋಗಿಸುತ್ತಾರೆ. ಇದರಿಂದಾಗಿ ಶ್ರೀಯುತರು ಭತ್ತದ ಹುಲ್ಲನ್ನು ಕತ್ತರಿಸಲು ಆಗುವ ಆಳುಗಳ ಸಮಸ್ಯೆ ಹಾಗೂ ಸಮಯದ ಸಮಸ್ಯೆಯನ್ನು ನಿವಾರಿಸಿಕೊಂಡಿದ್ದಾರೆ.



ಅಣಬೆ ಬೀಜವನ್ನು ಆಯ್ಕೆ ಮಾಡಲು ಶಿಶಿರ್‌ರವರು ಹಲವು ವಿಜ್ಞಾನಿಗಳ ಜೊತೆ ಚರ್ಚೆ ನಡೆಸಿ, ವಿವಿಧ ಪ್ರಯೋಗಾಲಯಗಳಿಗೆ ಭೇಟಿ ಮಾಡಿ ಉತ್ತಮವಾದ ಅಣಬೆ ಬೀಜವನ್ನು ತರಿಸಿಕೊಳ್ಳುತ್ತಾರೆ (ಕೃಷಿ ವಿಜ್ಞಾನ ಕೇಂದ್ರ, ಮೂಡಿಗೆರೆಯಿಂದ). ತಂದಂತಹ ಅಣಬೆ ಬೀಜವನ್ನು ವೈಜ್ಞಾನಿಕವಾಗಿ ಸ್ವಚ್ಛ ಸ್ಥಳದಲ್ಲಿ ಶೇಖರಿಸಿಟ್ಟು ಪ್ಯಾಕೆಟ್ ಮಾಡುವ ಸಮಯದಲ್ಲಿ ಇದನ್ನು ಉಪಯೋಗಿಸಿಕೊಳ್ಳುತ್ತಾರೆ.

ಇದಕ್ಕಾಗಿ 12 x 8 ಗಜದ ಪ್ಲಾಸ್ಟಿಕ್ ಚೀಲಗಳನ್ನು ಸಮೀಪದ ಅಂಗಡಿಗಳಿಂದ ಕೊಂಡು ಆ ಪ್ಲಾಸ್ಟಿಕ್ ಚೀಲಗಳನ್ನು ಕೂಡ ಮುಂಜಾಗ್ರತ ಕ್ರಮವಾಗಿ ಆಟೋಕ್ಲೈವ್‌ನಲ್ಲಿ ಇಟ್ಟು ಇದರಲ್ಲಿರುವ ಅನುಪಯುಕ್ತ ಜೀವಾಣುಗಳನ್ನು ನಿಷ್ಕ್ರಿಯಗೊಳಿಸುತ್ತಾರೆ.

ಅಣಬೆ ಪ್ಯಾಕೆಟ್‌ಗಳನ್ನು ಸಿದ್ಧಪಡಿಸುವ ಸಮಯದಲ್ಲಿ ಬೇಕಾಗುವ ಕೂಲಿ ಆಳುಗಳನ್ನು ಹತ್ತಿರದ ಮನೆಗಳ ಮಹಿಳೆಯರಿಗೆ ಉದ್ಯೋಗವಕಾಶವನ್ನು ನೀಡುವ ಸಲುವಾಗಿ ನಿಯೋಜಿಸಿಕೊಳ್ಳುತ್ತಾರೆ. ಆ ಮಹಿಳೆಯರಿಗೆ ಅಣಬೆ ತಯಾರಿಕೆ ಬಗ್ಗೆ, ಅಣಬೆ ಪ್ಯಾಕೆಟ್ ತಯಾರಿಸುವಾಗ ಕೈಗೊಳ್ಳಬೇಕಾದ ಸ್ವಚ್ಛತೆ ಹಾಗೂ ಮುಂಜಾಗ್ರತ ಕ್ರಮಗಳ ಬಗ್ಗೆ ಮಾಹಿತಿ ಹಾಗೂ ಸ್ವಚ್ಛತಾ ಪ್ರಾತ್ಯಕ್ಷಿಕೆಯನ್ನು ನೀಡುತ್ತಾರೆ.

ದೊಡ್ಡ ಪ್ರಮಾಣದಲ್ಲಿ ಅಣಬೆ ಕೃಷಿ ಮಾಡಿದ ನಂತರ 20 ದಿನಗಳ ಬಳಿಕ ಅಣಬೆ ಪ್ಯಾಕೆಟ್‌ಗಳಿಗೆ ನೀರು ಹಾಕುವ ಸಮಸ್ಯೆ ಕಾಡಿದಾಗ ಶ್ರೀಯುತರು ಸಣ್ಣ ಪವರ್ ಸ್ಪ್ರೇಯರ್ ಅನ್ನು ನೀರು ಹಾಕುವ ಕಾರ್ಯಕ್ಕೆ ಅಳವಡಿಸಿಕೊಳ್ಳುತ್ತಾರೆ. ಇದರಿಂದಾಗಿ ಒಂದು ಜಾಗದಿಂದಲೇ ಬಹುತೇಕ ಅಣಬೆ ಪ್ಯಾಕೆಟ್‌ಗಳಿಗೆ ನೀರುಣಿಸಲು ಸಾಧ್ಯವಾಗುವುದರ ಜೊತೆಗೆ ನೀರುಣಿಸುವ ಸಮಯದಲ್ಲಿ ಮನುಷ್ಯರ ಓಡಾಟದಿಂದ ಅಣಬೆ ಪ್ಯಾಕೆಟ್ ಮೇಲೆ ಆಗುತ್ತಿದ್ದ ದುಷ್ಪರಿಣಾಮಗಳನ್ನು ತಡೆಗಟ್ಟಲು ಸಹಾಯವಾಗುತ್ತದೆ. ಇದರಿಂದ ನೀರುಣಿಸಲು ಸಮಯದ ಸದುಪಯೋಗ, ಅಣಬೆ ಮನೆಯಲ್ಲಿ ಹೆಚ್ಚು ತಿರುಗಾಟವನ್ನು ತಡೆಯಲು ಹಾಗೂ ಅಣಬೆ ಪ್ಯಾಕೆಟ್‌ಗಳ ಅಡ್ಡ ಸೋಂಕು(ಕ್ರಾಸ್ ಇನ್ಫೆಕ್ಷನ್)ಅನ್ನು ನಿಯಂತ್ರಿಸಲು ಸಹಾಯವಾಗುತ್ತದೆ. ಇದರಿಂದಾಗಿ ಹಣ ಉಳಿತಾಯದ ಜೊತೆಗೆ ಅಣಬೆ ಬೆಳೆಯ ಇಳುವರಿಯನ್ನು ಹೆಚ್ಚಿಸಿಕೊಂಡಿರುತ್ತಾರೆ.

**ಮಾರಾಟ**

ಕೃಷಿ ವಿಜ್ಞಾನ ಕೇಂದ್ರದ ಸಂಪರ್ಕದಿಂದಾಗಿ ವಿವಿಧ ರೀತಿಯ ಗ್ರಾಹಕರ ವಾಟ್ಸಪ್ ಗ್ರೂಪ್‌ಗಳ ರಚನೆ ಮಾಡಿ, ಪೇಟೆಯಲ್ಲಿರುವ ವಿವಿಧ ತರಕಾರಿ ಅಂಗಡಿಗಳನ್ನು ಸಹ ಸಂಪರ್ಕಿಸಿ, ಸರ್ಕಾರಿ ಅಧಿಕಾರಿಗಳ ವಾಟ್ಸಪ್ ಗ್ರೂಪ್‌ಗಳನ್ನು ರಚಿಸಿ, ವಸತಿ ಶಾಲೆಗಳನ್ನು ಸಂಪರ್ಕಿಸಿ ಹಾಗೂ ಗ್ರಾಹಕರ ಮನೆ ಮನೆಗೆ ನೇರ ಮಾರುಕಟ್ಟೆ ವ್ಯವಸ್ಥೆಗಳನ್ನು ಕಲ್ಪಿಸಿ ಅಣಬೆ ಕೃಷಿಯ ಮಾರುಕಟ್ಟೆ ಮಾಡಲು ಶಿಶಿರ್‌ರವರು ಪ್ರಾರಂಭಿಸುತ್ತಾರೆ. ಈ ಮಾರಾಟವನ್ನು ಸವಾಲಾಗಿ ಸ್ವೀಕರಿಸಿದ ಶ್ರೀ ಶಿಶಿರ್‌ರವರು 15 ದಿನದಿಂದ 1 ತಿಂಗಳ ಕಾಲ ಮಾರುಕಟ್ಟೆಯನ್ನು ಅಭ್ಯಾಸ ಮಾಡಿ ತಮ್ಮ ಅಣಬೆಯನ್ನು ಮಾರಾಟ ಮಾಡಲು ಸಿದ್ಧರಾಗುತ್ತಾರೆ. ಕೃಷಿ ವಿಜ್ಞಾನ ಕೇಂದ್ರ ತಿಳಿಸಿದಂತಹ ಮಾರುಕಟ್ಟೆಗಳ ಸಂಪರ್ಕದಿಂದಾಗಿ ಸುಮಾರು 1 ದಿನಕ್ಕೆ 500 ಕೆ.ಜಿ.ಗೂ ಹೆಚ್ಚು ಅಣಬೆಯ ಬೇಡಿಕೆ ಗ್ರಾಹಕರಿಂದ ಸ್ಥಳೀಯವಾಗಿ ಸೃಷ್ಟಿಯಾಗಿದೆ.

ಪುಟ. 20ರಲ್ಲಿ ಮುಂದುವರೆದಿದೆ.........

ಪುಟ. 9 ರಿಂದ...

## ಆಯಿಸ್ಟರ್ ಅಣಬೆ ಉದ್ಯಮದಿಂದ ಯಶಸ್ಸು ಕಾಣುತ್ತಿರುವ ಮಲೆನಾಡಿನ ಯುವಕ – ಶ್ರೀ ಶಿಶಿರ್ ಬಿ.ಎಸ್.

ಇದರಿಂದಾಗಿ ಶಿಶಿರ್‌ರವರಿಗೆ ಮಾರುಕಟ್ಟೆ ಸಮಸ್ಯೆಯಿಲ್ಲದೆ ಅತೀ ಹೆಚ್ಚು ಲಾಭವನ್ನು ಪಡೆಯುತ್ತಿದ್ದಾರೆ. ಶಿಶಿರ್‌ರವರು ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಸ್ನೇಹಿತರಿಗೂ ಸಹ ತಮ್ಮ ಅಣಬೆ ಬೆಳೆಯ ಬಗ್ಗೆ ತಿಳಿಸಿ ಮಾರುಕಟ್ಟೆಗೆ ನೆರವಾಗಬೇಕು ಎಂದು ಕೇಳಿದಾಗ, ಹೊರ ದೇಶಗಳಿಂದಲೂ ಕೂಡ ಅಣಬೆ ಬೇಡಿಕೆ ಬಂದಿದ್ದು, ಮಾರಾಟ ಮಾಡಲು ಸಜ್ಜಾಗುತ್ತಿದ್ದಾರೆ. ಹಾಗೆಯೇ ಅವರು ಮಾಡಿರುವಂತಹ ಅಣಬೆ ಕೃಷಿಯ ಪ್ರಚಾರಕ್ಕೆ ಗ್ರಾಹಕರು ನೇರವಾಗಿ ಅವರ ಅಣಬೆ ಕೃಷಿ ಘಟಕಕ್ಕೆ ಬಂದು ಸಾಲಿನಲ್ಲಿ ನಿಂತು ಅಣಬೆಯನ್ನು ಕೊಳ್ಳುತ್ತಿದ್ದಾರೆ.

**ಶಿಶಿರ್‌ರವರ ಅಣಬೆ ಬೇಸಾಯದ ಖರ್ಚು ವೆಚ್ಚ**

ಒಂದು ಕೆ.ಜಿ. ಅಣಬೆ ಬೆಳೆಯಲು ಸರಾಸರಿ ರೂ. 60 ರೂಪಾಯಿಗಳಷ್ಟು ವೆಚ್ಚ ತಗಲುತ್ತದೆ. ಭತ್ತದ ಹುಲ್ಲು–2 ಕೆ.ಜಿ. ರೂ. 10, ಅಣಬೆ ಬೀಜ – 250 ಗ್ರಾಂ ರೂ. 20, ಪಾಲಿಥೀನ್ ಚೀಲ ರೂ. 5, ಕೂಲಿ ರೂ. 10, ಇತರೆ ಖರ್ಚುಗಳು ರೂ.15. ಮಾರುಕಟ್ಟೆಯಲ್ಲಿ ಹೋಲ್ ಸೇಲ್ ದರದಲ್ಲಿ ಒಂದು ಕೆ.ಜಿ. ಅಣಬೆ ಮಾರಿದಲ್ಲಿ ರೂ. 150 ರೂಪಾಯಿ ಗಳಿಸಬಹುದಾಗಿರುತ್ತದೆ. ರೀಟೈಲ್‌ನಲ್ಲಿ ಮಾರಿದರೆ ಒಂದು ಕೆ.ಜಿ. ಅಣಬೆಗೆ ರೂ. 200 ರೂಪಾಯಿ ಗಳಿಸಬಹುದಾಗಿರುತ್ತದೆ. ಸರಾಸರಿ ಒಂದು ಕೆ.ಜಿ. ಅಣಬೆ ಬೆಳೆದರೆ ರೂ. 90 ರೂಪಾಯಿ ನಿವ್ವಳ ಲಾಭ ಗಳಿಸಬಹುದಾಗಿರುತ್ತದೆ. ಶಿಶಿರ್‌ರವರು ತಮ್ಮ ಸಣ್ಣ ಮನೆಯಲ್ಲಿ ಪ್ರತಿ ತಿಂಗಳು 600 ಕೆ.ಜಿ. ಗೂ ಹೆಚ್ಚು ಅಣಬೆಯನ್ನು ಬೆಳೆದು ಸರಾಸರಿ ರೂ. 54,000 ಆದಾಯವನ್ನು ಅಣಬೆಯಿಂದ ಗಳಿಸುತ್ತಿದ್ದಾರೆ.

**ಶಿಶಿರ್‌ರವರಿಂದ ವಿಸ್ತರಣಾ ಚಟುವಟಿಕೆಗಳು**

ಶಿಶಿರ್ ರವರು ತಾವೊಬ್ಬರೆ ಅಣಬೆ ಕೃಷಿಯನ್ನು ಮಾಡದೆ ತಮ್ಮ ಗ್ರಾಮದ ಸುತ್ತಮುತ್ತಲಿನ 150 ಕ್ಕೂ ಹೆಚ್ಚಿನ ಜನರ ಗುಂಪು ರಚನೆ ಮಾಡಿ ಅಣಬೆ ಬೇಸಾಯ ಮಾಡಲು ನೆರವಾಗುತ್ತಿದ್ದಾರೆ. ಇವರು ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕಾ ಇಲಾಖೆ ಹಾಗೂ ಜಿಲ್ಲೆಯಲ್ಲಿ ನಡೆಯುವಂತಹ ಮೇಳಗಳಲ್ಲಿ ಭಾಗವಹಿಸಿ ಅಣಬೆ ಕೃಷಿಯ ಮಳಿಗೆಯನ್ನು ತೆರೆದು ಮಾಹಿತಿಯನ್ನು ನೀಡುವುದರ ಜೊತೆಗೆ ಮಾರಾಟದ ವ್ಯವಸ್ಥೆಯನ್ನು ಕೂಡ ಕಲ್ಪಿಸಿಕೊಂಡಿರುತ್ತಾರೆ. ಮಳಿಗೆಯಲ್ಲಿ ರೇಡಿ ಟು ಫ್ರೂಟ್ (ಆರ್.ಟಿ.ಎಫ್) 20 ದಿನಗಳ ಅಣಬೆ ಬೆಳೆದಿರುವ ಬ್ಯಾಗ್ಸ್‌ಗಳನ್ನು ತಯಾರಿಸಿ ಗ್ರಾಹಕರಿಗೆ ನೇರವಾಗಿ ನೀಡುವ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಅಲ್ಲದೇ, ತಮ್ಮ ತಯಾರಿಕಾ ಘಟಕಕ್ಕೆ ಬರುವ ಶಾಲಾ ಮಕ್ಕಳಿಗೆ ಅಣಬೆ ಕೃಷಿ ಕುರಿತು ಮಾಹಿತಿ ನೀಡುತ್ತಿದ್ದಾರೆ.

ಇವರು ಹೊಸದಾಗಿ ಅಣಬೆ ಉದ್ಯಮ ಮಾಡುವ ಯುವಕರಿಗೆ ಸಹಾಯ ಹಸ್ತ ನೀಡುವ ದೃಷ್ಟಿಯಿಂದ ತಮ್ಮ ಬಸ್ನಿ ಅಣಬೆ ಫಾರ್ಮ್ಸ್ ಅಣಬೆ ಉದ್ಯಮ ಮಾಡುವ ಯುವಕರಿಗೆ ಬೇಕಾದಂತಹ ಮಾಹಿತಿ, ಪ್ರಾತ್ಯಕ್ಷಿಕೆ



ನೀಡುವುದರ ಜೊತೆಗೆ ಇವರ ಫಾರ್ಮ್‌ನಿಂದ ಹುಲ್ಲು, ಅಣಬೆ ಬೀಜ, ಪ್ಲಾಸ್ಟಿಕ್ ಕವರ್‌ಗಳನ್ನು ನೀಡಿ ಯುವಕರನ್ನು ಅಣಬೆ ಬೇಸಾಯಕ್ಕೆ ಪ್ರೋತ್ಸಾಹಿಸಿ ಅಣಬೆಯನ್ನು ಬೈಬ್ಯಾಕ್ ಸಿಸ್ಟಮ್‌ನಲ್ಲಿ ವಾಪಸ್ ಕೊಳ್ಳುತ್ತಾರೆ. ಇದರಿಂದಾಗಿ ಶಿಶಿರ್‌ರವರು ಈ ಭಾಗದಲ್ಲಿ ಯುವಕರನ್ನು ಬೆಳೆಸಲು ಟೊಂಕ ಕಟ್ಟಿ ನಿಂತಿದ್ದಾರೆ. ಇವರು ತಾಜಾ ಅಣಬೆಯನ್ನು ಮಾರಾಟ ಮಾಡುವುದರ ಜೊತೆಗೆ ಅಣಬೆಯನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುತ್ತಿದ್ದಾರೆ.

**ಅಣಬೆಯಲ್ಲಿ ಮೌಲ್ಯವರ್ಧನೆ**

ಅಣಬೆ ಪುಡಿ, ಅಣಬೆ ಉಪ್ಪಿನ ಕಾಯಿ, ಅಣಬೆ ತಿಳಿ ಸಾಂಬಾರು ಪುಡಿ, ಡ್ರೈ ಮಷ್ರೂಮ್ ಹಾಗೂ ಅಣಬೆ ಪ್ರೋಟೀನ್ ರಿಚ್ ಪೌಡರ್

**ಶಿಶಿರ್‌ರವರ ಅನುಭವದ ಮಾತುಗಳು**

ನಮಗೆ ಅಣಬೆ ಬೇಸಾಯ ಮಾಡಲು ಯಾವುದೇ ರೀತಿಯ ಹೆಚ್ಚಿನ ಹಣಕಾಸಿನ ಅವಶ್ಯಕತೆ ಇರುವುದಿಲ್ಲ. ತಮ್ಮ ಬಳಿಯಲ್ಲಿಯೇ ಇರುವ ಜಮೀನಿನ ಕೃಷಿ ತ್ಯಾಜ್ಯ ಹಾಗೂ ಅಲ್ಪ ಹಣಕಾಸಿನಲ್ಲೇ ಮೇಲೆ ಹೇಳಿರುವ ಅಣಬೆ ಬೀಜ ಹಾಗೂ ಪಾಲಿಥೀನ್ ಕವರ್ ಸಹಾಯದಿಂದ 30 ದಿನದಲ್ಲಿ ಅಣಬೆಯನ್ನು ಉತ್ಪಾದಿಸಿ, ಹೆಚ್ಚು ನಿವ್ವಳ ಲಾಭವನ್ನು ಗಳಿಸಬಹುದಾಗಿರುತ್ತದೆ. ಯಾವ ಉದ್ಯಮದಲ್ಲೂ ಅಥವಾ ಕೃಷಿ ಚಟುವಟಿಕೆಯಲ್ಲಿಯೂ ಅಲ್ಪ ಅವಧಿಯಲ್ಲಿ ಕಡಿಮೆ ಬಂಡವಾಳದಲ್ಲಿ ಇಷ್ಟು ಮೊತ್ತದ ಆದಾಯ ಬರುವುದಿಲ್ಲ. ನನ್ನ ಅನುಭವಕ್ಕೆ ಬಂದಿರುವಂತೆ ನಮ್ಮ ರೈತರು ಶ್ರದ್ಧೆಯಿಂದ ಅಣಬೆ ಬೇಸಾಯ ಮಾಡಿದ್ದಲ್ಲಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದು. ನಮ್ಮ ದೇಶದ ಜನಸಂಖ್ಯೆಗೆ ಅನುಗುಣವಾಗಿ ಅಣಬೆ ಬೇಸಾಯ ಮಾಡಿ ತಿನ್ನುವ ಅಭ್ಯಾಸವನ್ನು ಬೆಳೆಸಿದ್ದಲ್ಲಿ ಖಂಡಿತವಾಗಿಯು ನಮ್ಮ ಜನರು ಆರೋಗ್ಯವಂತರಾಗುತ್ತಾರೆ. ಜೊತೆಗೆ ನಮ್ಮ ಆರ್ಥಿಕತೆ ಸದೃಢವಾಗಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ಶಿಶಿರ್‌ರವರನ್ನು ಸಂಪರ್ಕಿಸಲು ಬಯಸುವವರು ಬಸ್ನಿ ಅಣಬೆ ಫಾರ್ಮ್ಸ್, ಬಸ್ನಿ ಗ್ರಾಮ, ಬಣಕಲ್ ಹೋಬಳಿ, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇಲ್ಲಿಗೆ ಬಂದು ಭೇಟಿಯಾಗಬಹುದು. ದೂರವಾಣಿ ಸಂಪರ್ಕಕ್ಕಾಗಿ 8277405800 ಈ ಸಂಖ್ಯೆಗೆ ಕರೆ ಮಾಡಬಹುದು.